ಕನ್ನಡಪ್ರಭ
ಶುಕ್ರವಾರ 5.5.2017

ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಮನವಿ ಮಾಡ ಲಾಗಿದೆ ಎಂದು ಹೇಳಿದರು.

ಪೊಲೀಸ್ ಅಧಿಕಾರಿಗಳ ವರ್ಗಾವಣೆಗೆ ಸಂಬಂಧ ಪಟ್ಟಂತೆ ಪ್ರಕಾಶ್‌ಸಿಂಗ್, ಯೂನಿಯನ್ ಆಫ್ ಇಲಾಖೆಗೆ ನೀಡಬೇಕು ಎಂದು ನ್ಯಾಯಾಲಯ ಸೂಚಿಸಿದೆ. ಈ ಆದೇಶದ ಮೇರೆಗೆ 2010ರಲ್ಲಿ ಪೊಲೀಸ್ ಸಿಬ್ಬಂದಿ ಮಂಡಳಿ ಆರಂಭಿಸಲಾಗಿದೆ. ಆದರೆ,ಅದು ನೆಪಮಾತ್ರಕ್ಕೆ ಎಂಬುವಂತೆ ಕಾರ್ಯನಿ ನಿರ್ವಹಿಸುವಂತೆ ... ಇಲಾಖೆ ಅಧಿಕಾರಿಗಳಿಗೆ 165 ಶಿಫಾರಸು ಪತ್ರಗಳನ್ನು ಬರೆದಿದ್ದಾರೆ. ಇದು ನ್ಯಾಯಾಲಯದ ತೀರ್ಪನ್ನು ಉಲ್ಲಂಘನೆ ಮಾಡಿದಂತಾಗುತ್ತದೆ ಎಂದರು.

# 7ರಿಂದ ಹವ್ಯಕ ಭವನದಲ್ಲಿ ಪ್ರತಿಷ್ಠಾಪನೆ, ಕುಂಭಾಭಿಷೇಕ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಶ್ರೀ ಅಖಿಲ ಹವ್ಯಕ ಮಹಾಸಭಾ (ಬೆಂಗಳೂರು) ವತಿಯಿಂದ ಮೇ 7ರಿಂದ 3 ದಿನಗಳ ಕಾಲ ಶ್ರೀ ಸಿದ್ಧಿ ವಿನಾಯಕ ದೇವರ ಪುನಃ ಪ್ರತಿಷ್ಠಾಪನೆ ಹಾಗೂ ಬ್ರಹ್ಮ ಕುಂಭಾಭಿಷೇಕ ಮಹೋತ್ಸವವನ್ನು ನಗರದ ಮಲ್ಲೇಶ್ವರ ಎಂಟನೇ ಮುಖ್ಯರಸ್ತೆಯಲ್ಲಿ ಇರುವ ಹವ್ಯಕ ಭವನದಲ್ಲಿ ಏರ್ಪಡಿಸಲಾಗಿದೆ.

ಮೇ 9ರಂದು ಮಂಗಳವಾರ ಬೆಳಗ್ಗೆ 11ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದ್ದು, ಸಭೆಯ ಅಧ್ಯಕ್ಷತೆಯನ್ನು ಶ್ರೀ ಅಖಿಲ ಹವ್ಯಕ ಮಹಾಸಭಾ (ಬೆಂಗಳೂರು) ಅಧ್ಯಕ್ಷರಾದ ಡಾ.ಗಿರಿಧರ ಕಜೆ ವಹಿಸಲಿದ್ದಾರೆ ಎಂದು ಸಂಘ ತಿಳಿಸಿದೆ.

ಈ ವೇಳೆ ಹೊರನಾಡು ಆದಿ ಶಕ್ತ್ಯಾತ್ಮಕ ಶ್ರೀ ಅನ್ನ ಪೂರ್ಣೇಶ್ವರಿ ದೇವಸ್ಥಾನದ ಧರ್ಮ ದರ್ಶಿ ಭೀಮೇಶ್ವರ ಜೋಷಿ, ಮಲ್ಲೇಶ್ವರ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ, ಬಿಬಿಎಂಪಿ ಸದಸ್ಯ ಮಂಜುನಾಥರಾಜು ಭಾಗವಹಿಸಲಿದ್ದಾರೆ.

**3 ದಿನದ ಕಾರ್ಯಕ್ರಮಗಳು:** ಮೇ 7ರಂದು ಭಾನುವಾರ ಬೆಳಗ್ಗೆ ಗಣಪತಿ ಪೂಜೆ, ಪುಣ್ಯಾಹ, ನಾಂದಿ, ಬ್ರಹ್ಮ ಕೂರ್ಚಾ ಹೋಮ, ಬಿಂಬಶುದ್ಧಿ, ಗಣಪತಿ ಹೋಮ ನಡೆಯಲಿದೆ. ಅಂದು ಸಂಜೆ ಪ್ರಧಾನ ಸಂಕಲ್ಪ, ಋತ್ವಿಗ್ವ ರ್ಣನೆ, ಕೃಚ್ಛ್ರಾಚರಣೆ, ಆಲಯ ಪ್ರತಿಗ್ರಹ, ಆವರಣ ಶುದ್ಧಿ, ಯಾಗ ಶಾಲಾ ಪ್ರವೇಶ, ಕಲಶಸ್ಥಾಪನೆ, ರಾಕ್ಷೋಘ್ನ ಹೋಮ ಮತ್ತು ವಾಸ್ತು ಹೋಮ, ಬಲಿ ನೆರವೇರಲಿದೆ.

ಮೇ 8ರಂದು ಸೋಮವಾರ ಬೆಳಗ್ಗೆ ಪ್ರತಿ ಷ್ಠಾಪನಾಂಗ ಹೋಮ, ನ್ಯಾಸಾದಿಗಳು, ಮೂರ್ತಿಪ್ರತಿಷ್ಠೆ, ತತ್ತ್ವಕಲಾಹೋಮ, ಕಲಶಾಭಿಷೇಕ. ಸಂಜೆ ಬ್ರಹ್ಮ ಕುಂಭಾಭಿಷೇಕಾಂಗ ಕಲಶಸ್ಥಾಪನೆ, ರಾಜೋಪಚಾರ ಪೂಜೆ ನಡೆಯಲಿದೆ.

ಮೇ 9ರಂದು ಮಂಗಳವಾರ ನವಗ್ರಹ ಶಾಂತಿ, ಚತುದ್ರ್ರವ್ಯ ಅಥರ್ವಶೀರ್ಷ ಹೋಮ, ಪೂರ್ಣಾಹುತಿ, ಬ್ರಹ್ಮ ಕುಂಭಾಭಿಷೇಕ, ಮಹಾಪೂಜೆ ನಡೆಯಲಿದೆ ಎಂದು ಶ್ರೀ ಅಖಿಲ ಹವ್ಯಕ ಮಹಾಸಭಾ (ಬೆಂಗಳೂರು) ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

wipro

## ವಿಪ್ರೋ ಲಿಮಿಟೆಡ್

ನೊಂದಾಯಿತ ಕಛೇರಿ: ದೊಡ್ಡ ಕನ್ನೆಲ್ಲಿ, ಸರ್ಜಾಪುರ ರಸ್ತೆ, ಬೆಂಗಳೂರು 560 035
ದೂ: +91-80-2844 0011, ಫ್ಯಾಕ್ಸ್: +91 80-2844 0054, CIN: L32102KA1945PLC020800
Website: www.wipro.com, Email: corp-secretarial@wipro.com

### ಸೂಚನೆ

ಸೂಚಿಸುವುದೇನೆಂದರೇ, 2014 ರ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳ ನಿಯಮ 22 ರ ಜೊತೆ ಓದಿಕೊಳ್ಳಬೇಕಾದ, 2013 ರ ಕಂಪನಿಗಳ ಕಾಯಿದೆಯ ಕಲಂ 110 ರ ಮುಂದುವರಿಕೆಯಾಗಿ (ಯಾವುದೇ ಶಾಸನ ಬದ್ಧ ಮಾರ್ಪಾಡು(ಗಳು) ಸೇರಿದಂತೆ ಅಥವಾ ಆಗಾಗ ಆಗಿರುವ ಪುನರ್ ರಚನೆ(ಗಳು), 2015ರ ಸೆಬಿ (ಲಿಸ್ಟಿಂಗ್ ಹೊಣೆಗಾರಿಕೆಗಳು ಮತ್ತು ಘೋಷಣೆಗಳು ಹಾಗೂ ಇತರೆ ಅನ್ವಯಿಸುವ ಕಾನೂನುಗಳು ಮತ್ತು ನಿಯಂತ್ರಣಗಳು - ಇವುಗಳಂತೆ ಕೆಳಕಂಡ ಸಾಧಾರಣ ಠರಾವುಗಳಿಗೆ ವಿಪ್ರೋ ಲಿಮಿಟೆಡ್‌ನ ಸದಸ್ಯರ (ಕಂಪನಿ) ಮಂಜೂರಾತಿಯನ್ನು ಇ-ಮತದಾನ ಸೇರಿದಂತೆ ಅಂಚೆ ಮತದಾನದ ಮೂಲಕ ಕೋರಲಾಗಿದೆ.

| ಕ್ರ.ಸಂ | ಸಾಮಾನ್ಯ ಠರಾವುಗಳ ವಿವರಣೆ |
|---|---|
| 1 | ಅಧಿಕೃತ ಬಂಡವಾಳದಲ್ಲಿ ಹೆಚ್ಚಳ ಮತ್ತು ಕಂಪನಿಯ ಸಂಘಟನಾ ಪತ್ರಕ್ಕೆ ಆನಂತರದ ತಿದ್ದುಪಡಿ |
| 2 | ಬೋನಸ್ ಷೇರುಗಳ ವಿತರಣೆ |

ಕಂಪನಿಯು ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್‌ನವರು ನಿರ್ವಹಿಸುತ್ತಿರುವ ರಿಜಿಸ್ಟರ್‌ನಲ್ಲಿ ಸದಸ್ಯರ ಹೆಸರುಗಳು ಇವೆಯೊ ಅವರಿಗೆ ಮತ್ತು ನಿಕ್ಷೇಪದಾರರಿಂದ, ಏಪ್ರಿಲ್ 28, 2017 ರಂದು ಇದ್ದಂತೆ ಅಂದರೆ ನಿಗದಿತ ದಿನಾಂಕದಂದು ಇರುವಂತೆ (ಎ) ಇರುವ ಫಲಾನುಭವಿಗಳ ಪಟ್ಟಿಯಲ್ಲಿರುವವರಿಗೆ, ನಿಕ್ಷೇಪ ಭಾಗೀದಾರರು / ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಘಜೆಂಟ್ ಯಾರ ಇಮೇಲ್ ಐಡಿಗಳು ನೊಂದಾವಣೆಗೊಂಡಿರುವವೋ ಅಂತಹ ಸದಸ್ಯರಿಗೆ ವಿದ್ಯುನ್ಮಾನ ಮೇಲ್ ಮೂಲಕ (ಬಿ) ಯಾವ ಸದಸ್ಯರು ತಮ್ಮ ಐಡಿಯನ್ನು ನೊಂದಾವಣೆ ಮಾಡಿಕೊಂಡಿಲ್ಲವೋ ಅಂತಹ ಸದಸ್ಯರುಗಳಿಗೆ ಭೌತಿಕ ರೀತಿಯಲ್ಲಿ ಸ್ವ-ವಿಳಾಸದ ವ್ಯಾಪಾರ ಉತ್ತರ ಲಕೋಟೆಯೊಂದಿಗೆ ಮೇ 4, 2017 ರಂದು ರವಾನಿಸಲಾಗಿದೆ. ನಿಗದಿತ ದಿನಾಂಕದಂದು ಸದಸ್ಯರಾಗದಿರುವ ಸದಸ್ಯರು ಇದನ್ನು ಮಾಹಿತಿಗಾಗಿ ಮಾತ್ರ ಎಂಬುದಾಗಿ ಭಾವಿಸಬೇಕು.

ಕಂಪನಿಯು ತನ್ನ ಸದಸ್ಯರಿಗಾಗಿ ಇ-ಮತದಾನ ಸೌಲಭ್ಯ ಒದಗಿಸುವುದಕ್ಕಾಗಿ ಕಾರ್ವಿ ಕಂಪ್ಯೂಟರ್‌ಷೇರ್ ಪ್ರವೇಟ್ ಲಿಮಿಟೆಡ್‌ನ ಸೇವೆಗಳನ್ನು ನೇಮಿಸಿಕೊಂಡಿದೆ. ಅಂಚೆ ಮತದಾನ ಮತ್ತು ಇ-ಮತದಾನ ಎರಡೂ ಮೇ 5, 2017 ರ ಶುಕ್ರವಾರ ಬೆಳಿಗ್ಗೆ 09.00 ಕ್ಕೆ (ಭಾರತೀಯ ಕಾಲಮಾನ) ಆರಂಭವಾಗುತ್ತದೆ ಮತ್ತು ಜೂನ್ 3, 2017 ರ ಶನಿವಾರ ಸಂಜೆ 5.00 ಕ್ಕೆ ಕೊನೆಗೊಳ್ಳುತ್ತದೆ. ಮತದಾನದಲ್ಲಿ ಅನುಸರಿಸಬೇಕಾದ ವಿವರವಾದ ಕ್ರಮಗಳನ್ನು ಅಂಚೆ ಮತದಾನದ ಸೂಚನೆ ಮತ್ತು ಅಂಚೆ ಮತದಾನದ ನಮೂನೆಯಲ್ಲಿ ನಮೂದಿಸಲಾಗಿದೆ.

ಕಂಪನಿಯ ನಿರ್ದೇಶಕ ಮಂಡಳಿಯು, ಅಂಚೆ ಮತದಾನ / ಇ-ಮತದಾನಗಳ ಪ್ರಕ್ರಿಯೆಯು ಉತ್ತಮ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಯುವಂತಾಗಲು ಶ್ರೀ ವಿ. ಶ್ರೀಧರನ್, ವೃತ್ತಿ ನಿರತ ಕಂಪನಿ ಕಾರ್ಯದರ್ಶಿ ಮತ್ತು ವಿ. ಶ್ರೀಧರನ್ ಅಂಡ್ ಅಸೋಸಿಯೇಟ್ಸ್‌ನ ಪಾಲುದಾರ (ಸದಸ್ಯತ್ವ ಸಂಖ್ಯೆ ಎಫ್ 2347) ಇವರನ್ನು ಪರಿಶೋಧಕ (ಸ್ಕ್ರೂಟಿನೈಸರ್) ರನ್ನಾಗಿ ನೇಮಿಸಿದೆ. ಸದಸ್ಯರು ಭರ್ತಿ ಮಾಡಿದ ಮತ್ತು ರುಜು ಮಾಡಿದ ಅಂಚೆ ಮತದಾನ ಪತ್ರಗಳನ್ನು ಜೂನ್ 3, 2017 ರ ಶನಿವಾರ ಸಂಜೆ 5 ರೊಳಗೆ ಅಥವಾ ಮುಂಚಿತವಾಗಿ ಪರಿಶೋಧಕರಿಗೆ ಕಳುಹಿಸಬೇಕು. ಜೂನ್ 3, 2017 ರ ಭಾತೀಯ ಕಾಲಮಾನ ಸಂಜೆ 5 ರ ನಂತರ ಬರುವಂತಹ ಸದಸ್ಯರ ಅಂಚೆ ಮತದಾನದ ಪತ್ರಗಳನ್ನು ಸಿಂಧುವಾದುದೆಂಬುದಾಗಿ ಪರಿಗಣಿಸುವುದಿಲ್ಲ.

ಅಂಚೆ ಮತದಾನ ನಮೂನೆಯನ್ನು ಪಡೆದುಕೊಳ್ಳದವರು corp-secretarial@wipro.com ಗೆ ಇ-ಮೇಲ್ ಕಳುಹಿಸಿ ಅಥವಾ ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್‌ಗೆ ಅರ್ಜಿ ಸಲ್ಲಿಸಿ ನಕಲು (ಡೂಪ್ಲಿಕೇಟ್) ಅಂಚೆ ಮತದಾನದ ನಮೂನೆಗಾಗಿ ಕೋರಿಕೊಳ್ಳಬಹುದಾಗಿದೆ. ಅಂಚೆ ಮತದಾನ ಸೂಚನೆ ಮತ್ತು ಅಂಚೆ ಮತ ಪತ್ರವನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ ಲಿಂಕ್‌ಗಳಾದ ಕ್ರಮವಾಗಿ (http://www.wipro.com/documents/investors pdf-files/Wipro-Limited-Bonus-Postal-Ballot-Notice-and-instructions.pdf) & (http://www.wipro.com documents/investors/pdf-files/Wipro-Limited-Bonus-Postal-Ballot-Form.pdf) ಗಳಿಂದಲೂ ಸಹ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಅಂಚೆ ಮತಪತ್ರದ ಮತದಾನದ ಫಲಿತಾಂಶಗಳನ್ನು ಪರಿಶೋಧಕರ ವರದಿಯೊಂದಿಗೆ ಕಂಪನಿಯ ನೋಂದಾಯಿತ ಕಛೇರಿಯಲ್ಲಿ ಜೂನ್ 5, 2017 ರ ಸೋಮವಾರದಂದು ಅಥವಾ ಮುಂಚಿತವಾಗಿ ಕಂಪನಿಯ ಅಧ್ಯಕ್ಷರು ಘೋಷಿಸುತ್ತಾರೆ ಮತ್ತು ಕಂಪನಿಯ ವೆಬ್‌ಸೈಟ್ (www.wipro.com) ನಲ್ಲಿ ಪ್ರಕಟಿಸಲಾಗುವುದು ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳು, ನಿಕ್ಷೇಪದಾರರು, ರಿಜಿಸ್ಟ್ರಾರ್ ಮತ್ತು ಷೇರುಗಳ ವರ್ಗಾವಣೆ ಏಜೆಂಟರಿಗೆ ಸಹ ಮಾಹಿತಿಗಾಗಿ ಸಲ್ಲಿಸಲಾಗುವುದು.

ಅಂಚೆ ಮತದಾನ ಅಥವಾ ಇ-ಮತದಾನದ ಬಗ್ಗೆ ದೂರುಗಳೇನಾದರೂ ಇದ್ದಲ್ಲಿ ಶ್ರೀ ಬಿ. ಶ್ರೀನಿವಾಸ್ ಡೆಪ್ಯೂಟಿ ಮೇನೇಜರ್, ಕಾರ್ವಿ ಕಂಪ್ಯೂಟರ್‌ಷೇರ್ ಪ್ರೈವೇಟ್ ಲಿಮಿಟೆಡ್ ಇವರನ್ನು ದೂರವಾಣಿ ಸಂಖ್ಯೆ 040-67162222, ಇಮೇಲ್ ಐಡಿ- einward.ris@karvy.com ಮೂಲಕ ಸಲ್ಲಿಸಬಹುದಾಗಿದೆ.

ಸ್ಥಳ: ಬೆಂಗಳೂರು
ದಿನಾಂಕ: ಮೇ 5, 2017

ವಿಪ್ರೋ ಲಿಮಿಟೆಡ್ ಪರವಾ
ಎಂ. ಸನಾಉಲ್ಲಾ ಖಾನ
ಕಂಪನಿ ಕಾರ್ಯದರ್ಶಿ